ಓ ಎಸ್ ನಂಃ 447/2023
ಪಿ. ಡಬ್ಲ್ಯೂ- 1

**(ಇಂದು ದಿನಾಂಕ 26.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವೆ ದಾಖಲಿಸುವ ಸವಯದಲ್ಲಿ ದಾವಾ ಷೇಡ್ಯೂಲ್ ಬಿ ಆಸ್ತಿ ನನ್ನ ತಂದೆಯ ಹೆಸರಿನಲ್ಲಿಇರುತ್ತದೆ. ನಿ.ಪಿ.13-2020 ರ ಸಾಲಿನ ದಾಖಲೆ ಎಂದರೆ ಸರಿ. ಬಿ ಆಸ್ತಿಗೆ ಸಂಬಂಧಿಸಿದಂತೆ ಇ ಖಾತಾ ನೀಡಿದ್ದಾರೆ ಎಂದರೆ ಸರಿ. ದಾವಾ ಬಿ ಆಸ್ತಿ ದಾವೆ ಸಲ್ಲಿಸುವ ಕಾಲಕ್ಕೆ ಪ್ರತಿವಾದಿ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಆಸ್ತಿಯನ್ನು ದಿಃ02.12.2020 ರಂದು ಜಯಲಕ್ಷ್ಮೀ ರಮೇಶ ದೋತ್ರದರವರಿಗೆ ದಾನ ಪತ್ರಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಬಿ ಆಸ್ತಿನ್ನು 2020 ರಲ್ಲಿ ದಾನ ಪತ್ರ ಮಾಡಿದ್ದರು ಕೂಡಾ 2023 ರಲ್ಲಿ ದಾವೆ ಮಾಡುವ ಸಮಯದಲ್ಲಿ ಸದರಿ ವಿಷಯಗೊತ್ತಿದ್ದರು ಕೂಡಾ ಅದನ್ನು ಮುಚ್ಚಿಟ್ಟು ಮತ್ತು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಆಸ್ತಿ ಜಯಲಕ್ಷ್ಮೀ ಹೆಸರಿನಲ್ಲಿ ಇದೆ ಎಂದು ನನಗೆ ಇವತ್ತೇ ಗೊತ್ತಾಗಿರುತ್ತದೆ. ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಸಾಕ್ಷೀ ಮುಂದುವರೆದು ಪ್ರತಿವಾದ ಪತ್ರ ಓದಿರುತ್ತೇನೆ ಆದರೆ ನೆನಪಿರುವುದಿಲ್ಲ ಎನ್ನುತ್ತಾರೆ. ಪ್ರತಿವಾದಿ ದಾವಾ ಬಿ ಆಸ್ತಿ ಜಯಲಕ್ಷ್ಮೀ ಹೆಸರಿನಲ್ಲಿ ಇರುತ್ತದೆ, ಈಗ ಆಕೆಯೇ ಮಾಲೀಕಳಾಗಿರುತ್ತಾರೆ ಎಂದು ತನ್ನ ಪ್ರತಿವಾದ ಪತ್ರದಲ್ಲಿ ಬರೆದಿರುತ್ತಾನೆ ಎಂದರೆ ಸರಿ. ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ಆ ವಿಷಯ ಬರೆದಿದ್ದರೂ ಕೂಡಾ ನಾನು ಆಕೆಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಜಯಲಕ್ಷ್ಮೀ ಯನ್ನು ಪಕ್ಷಗಾರರನ್ನಾಗಿ

ಮಾಡಿಲ್ಲರುವುದಿಲ್ಲ ಆದ್ದರಿಂದ ದಾವೆ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿಗಳ ಮಧ್ಯ ಸಾಕಷ್ಟು ಕೇಸ್ ಗಳಾಗಿ ವೈಮನಸ್ಸು ಇರುತ್ತದೆ ಎಂದರೆ ಸರಿ. ದಾವಾ ಬಿ ಆಸ್ತಿಯನ್ನು ನನ್ನ ಅಜ್ಜ ಖರೀದಿ ಮಾಡಿರುತ್ತಾನೆ. ನನ್ನ ಅಜ್ಜ ಹಣ ನೀಡಿ ಖರೀದಿಸಿರುತ್ತಾನೆ. ದಾವಾ ಬಿ ಆಸ್ತಿಯನ್ನು ನನ್ನ ಅಜ್ಜ ನನ್ನ ತಂದೆಗೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ ಬರೆದ ದಾನ ಪತ್ರ ಮೋಸ ದಿಂದ ಮಾಡಿರುತ್ತಾರೆಂದು ನನ್ನ ವಾದಪತ್ರದಲ್ಲಿ ಬರೆದಿಲ್ಲ. ನಾನು ದಾವೆಯಲ್ಲಿ ನನ್ನ ಅಜ್ಜ ಬರೆದ ದಾನ ಪತ್ರದ ಕುರಿತು ಘೋಷಣಾತ್ಮಕ ಪರಿಹಾರ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಆಸ್ತಿ ಖಾಲಿ ಜಾಗ ಇತ್ತು ಎಂದರೆ ಸರಿ. ನನ್ನ ತಂದೆ ಸಾಲ ಮಾಡಿ ದಾವಾ ಬಿ ಆಸ್ತಿಯಲ್ಲಿ ಮನೆ ಕಟ್ಟಿಸಿರುತ್ತಾರೆಂದರೆ ಸರಿ. ಸದರಿ ಸಾಲದ ಹಣವನ್ನು 01 ನೇ ಪ್ರತಿವಾದಿ ಪಾವತಿಸುತ್ತಿದ್ದಾನೆ ಎಂದರೆ ಇರಬಹುದು. ದಾವಾ ಬಿ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಬಿ ಆಸ್ತಿ ನನ್ನ ತಂದೆ ಸ್ವಯಾರ್ಜಿತ ಆಸ್ತಿ ಆದ ಕಾರಣ ನಾನು ಅದರಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಅ ಆಸ್ತಿ ಪತಾರ್ಜಿತ ಆಸ್ತಿ ಎಂದರೆ ಸರಿ. ಅದರಲ್ಲಿ ಪ್ರತಿವಾದಿ ನನ್ನ ಪಾಲಿನ ಆಸ್ತಿ ನೀಡಲು ಸಿದ್ದನಿರುತ್ತಾನೆ ಎಂದರೆ ಸಾಕ್ಷೀಯು ನಾವು ಕೇಳಿದಾಗ ನಮ್ಮ ಪಾಲಿನ ಆಸ್ತಿ ಕೊಟ್ಟಿರುವುದಿಲ್ಲ ಎನ್ನುತ್ತಾರೆ. ದಾವಾ ಬಿ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಗೊತ್ತಿದ್ದರು ಕೂಡಾ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷೀ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಓ ಎಸ್ ನಂಃ 447/2023
ಪಿ. ಡಬ್ಲ್ಯೂ- 1

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.